ಆ) ಇಲ್ಲದೆ ಹೋದಲ್ಲಿ ಸರ್ಕಾರವು ಸಂಚಾರಿ ಶುಲ್ಕ ಪಾವತಿ ಮಾಡುವ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಸೇವಾ ಠಾಣೆಗಳಲ್ಲಿ ಹಣ ವಸೂಲಿ ಮಾಡುವ ಕೌಂಟರ್‌ಗಳಿವೆ. ಇದಲ್ಲದೆ ಉಪ ವಿಭಾಗಗಳಲ್ಲಿಯೂ ಹಣ ವಸೂಲಿ ಮಾಡುವ ಕೌಂಟರ್‌ಗಳಿವೆ. ಪ್ರಸ್ತುತ ಕಾರ್ಯಾಚರಣೆ ವ್ಯವಸ್ಥೆಯಿಂದ ಸಂಚಾರಿ ಶುಲ್ಕ ಪಾವತಿ ಮಾಡುವ ಕೇಂದ್ರಗಳನ್ನು ಕರೆಯುವ ಅವಶ್ಯಕತೆ ಇಲ್ಲ. ಸಾರ್ವಜನಿಕ ಬೇಡಿಕೆಯನ್ನು ನಿರ್ವಹಿಸಲು ಪ್ರಸ್ತುತ ಹಣ ವಸೂಲಿ ಕೌಂಟರ್‌ಗಳು ಸಾಕಾಗಿದೆ.

**ಜಯನಗರ ವಿಧಾನ ಸಭೆ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶದ ಅಭಿವೃದ್ಧಿ**

1767. ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ರ ಸಾಲಿನಲ್ಲಿ ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಖರ್ಚು ಮಾಡಿರುವ ಹಣವೆಷ್ಟು? (ಏಪ್ರಿಲ್ 1991 ರಿಂದ ಜನವರಿ 92ರ ಅಂತ್ಯದವರೆಗೆ);

ಆ) ತೆಗೆದುಕೊಂಡಿರುವ ಅಭಿವೃದ್ಧಿ ಕಾಮಗಾರಿಯ ರೀತಿ ಹೇಗೆ?

ಇ) ಈ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಂಡಿದ್ದ ಸ್ಥಳಗಳು ಯಾವುವು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ರೂ. 13.06 ಲಕ್ಷಗಳು

ಆ) ಷೇವಿಂಗ್, ಸ್ಯಾನಿಟರಿ, ರಿಟೈನಿಂಗ್ ವಾಲ್, ಸ್ಟಾರಮ್ ವಾಟರ್ ಡ್ರೈನ್ ಮತ್ತು ಸುಲಭ ಶೌಚಾಲಯ ಹಾಗೂ ಆರ್ಥಿಕವಾಗಿ ಹಿಂದುಳಿದವರಿಗಾಗಿ ವಸತಿಗಳ ನಿರ್ಮಾಣ.

ಇ) 1) ಸರ್ವೆ ನಂ. 66. ಆಡುಗೋಡಿ

2) ಸರ್ವೆ ನಂ. 7. ತಾವರೆಕೆರೆ

3) ಸರ್ವೆ ನಂ. 5. ತಾವರೆಕೆರೆ

4) ಲಾಲ್‌ಬಾಗ್ ಸಿದ್ದಾಪುರ ಮತ್ತು

5) ಶಾಸ್ತ್ರಿನಗರ.